

بسم اللهِ الرّحمٰن الرّحيم

# ತವಕ್ಕುಲ್ ಅಲಲ್ಲಾಹ್ ಕುರಿತು ಹಝ್ರತ್ ಪೈಗಂಬರ್(ಸ)ರ ಜೀವನ ಚರಿತ್ರೆಯಿಂದ ವಿಶ್ವಾಸವರ್ಧಕ ಪ್ರಸ್ತಾಪ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **18–09–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَ رَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಪೈಗಂಬರ್(ಸ)ರ 'ತವಕ್ಕುಲ್ ಅಲಲ್ಲಾಹ್'ದ ಕುರಿತು ಪ್ರಸ್ತಾಪಿಸುತ್ತಾ ಕಳೆದ ಖುತ್ಬದಲ್ಲಿ ನಾನು ನಬಿ(ಸ) ಮಕ್ಕಾದಿಂದ ಹಿಜ್ರತ್ ಮಾಡಿದ ಘಟನೆಗಳನ್ನು ವಿವರಿಸಿದ್ದೆ. ಈ ಪ್ರಯಾಣದ ಕೆಲವು ಹೆಚ್ಚಿನ ವಿವರಗಳು ಚರಿತ್ರೆಯಲ್ಲಿ ಸಿಗುತ್ತವೆ, ಇವುಗಳಿಂದ ನಬಿ(ಸ)ರ ತವಕ್ಕುಲ್‌ನ ಶ್ರೇಷ್ಠತೆಯು ಇನ್ನಷ್ಟು ಎದ್ದುಕಾಣುತ್ತದೆ.

ಹಿಜ್ರತ್ ಸಂದರ್ಭದಲ್ಲಿ ಸುರಾಕಾ ಬಿನ್ ಮಾಲಿಕ್ ಎಂಬ ವ್ಯಕ್ತಿ ಖುರೈಶಿಯರು ಘೋಷಿಸಿದ್ದ ಬಹುಮಾನದ ಆಮಿಷದಿಂದ ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್(ರ)ರನ್ನು ಹಿಂಬಾಲಿಸಿದನು. ಸುರಾಕಾ ಮುಸಲ್ಮಾನನಾದ ನಂತರ ಸ್ವತಃ ಈ ಘಟನೆಯನ್ನು ವಿವರಿಸಿದ್ದಾನೆ. ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್(ರ)ರನ್ನು ಜೀವಂತವಾಗಿ ಅಥವಾ ಮೃತರನ್ನಾಗಿ ಹಿಡಿದು ತರುವವರಿಗೆ ಖುರೈಶಿಯರು ನೂರು ಒಂಟೆಗಳನ್ನು ಬಹುಮಾನವಾಗಿ ಘೋಷಿಸಿದ್ದರು. ಕರಾವಳಿಯ ಕಡೆಗೆ ಮೂವರ ಒಂದು ತಂಡ ಹೋಗುತ್ತಿರುವುದನ್ನು ಮತ್ತು ಅದು ಬಹುಶಃ ಮುಹಮ್ಮದ್(ಸ) ಹಾಗೂ ಅವರ ಸಹಚರರಿರಬೇಕೆಂದು ಸುರಾಕಾನಿಗೆ ಅನಿಸಿದಾಗ, ಆ ಬಹುಮಾನದಲ್ಲಿ ಬೇರೆ ಯಾರೂ ಪಾಲುದಾರರಾಗದಿರಲಿಕ್ಕಾಗಿ ಅವನು ಆ ಸುದ್ದಿಯನ್ನು ಮುಚ್ಚಿಟ್ಟನು. ಸುರಾಕಾ ತನ್ನ ವೇಗದ ಕುದುರೆಯನ್ನು ತರಿಸಿದನು ಮತ್ತು ಆ ತಂಡವನ್ನು ಹಿಂಬಾಲಿಸಲು ಪ್ರಾರಂಭಿಸಿದನು. ಅವನು ಶೀಘ್ರದಲ್ಲೇ ಅವರ ಸಮೀಪಕ್ಕೆ ತಲುಪಿದನು, ಎಷ್ಟರಮಟ್ಟಿಗೆಂದರೆ ಅವನಿಗೆ ಹಝ್ರತ್ ಪೈಗಂಬರ್(ಸ) ಪವಿತ್ರ ಖುರ್‌ಆನ್ ಪಠಿಸುತ್ತಿರುವ ಶಬ್ದವೂ ಕೇಳಿಸತೊಡಗಿತು. ಹಝ್ರತ್ ಅಬೂಬಕರ್(ರ) ಪದೇ ಪದೇ ಹಿಂದೆ ತಿರುಗಿ ನೋಡುತ್ತಿದ್ದರು, ಆದರೆ ಹಝ್ರತ್ ಪೈಗಂಬರ್(ಸ) ಅತ್ತಿತ್ತ ನೋಡುತ್ತಿರಲಿಲ್ಲ. ಸುರಾಕಾನ ಕುದುರೆ ಅಸಾಮಾನ್ಯವಾಗಿ ಎಡವಿತು. ಅವನು ಶಕುನವನ್ನು ನೋಡಿದಾಗ ಅದು ಅವನ ಉದ್ದೇಶಕ್ಕೆ ವಿರುದ್ಧವಾಗಿತ್ತು, ಆದರೆ ಅವನು ಬಹುಮಾನದ ಆಮಿಷದಿಂದ ಮುಂದಕ್ಕೆ ಹೋಗುತ್ತಲೇ ಇದ್ದನು. ಕೊನೆಗೆ ಕುದುರೆಯ ಕಾಲುಗಳು ಮರಳಿನಲ್ಲಿ ಹೂತುಹೋದವು. ಹೀಗೆ ಹಿಂಬಾಲಿಸುವುದರಿಂದ ಯಾವುದೇ ಒಳಿತಿಲ್ಲ ಎಂದು ಸುರಾಕಾನಿಗೆ ಅರಿವಾಯಿತು. ಆಗ ತನ್ನಿಂದ ಯಾವುದೇ ಹಾನಿಯಾಗುವುದಿಲ್ಲ ಎಂದು ಸುರಾಕಾ ಜೋರಾಗಿ ಕೂಗಿ ತಿಳಿಸಿದನು. ಅವನಿಗೆ ಏನು ಬೇಕೆಂದು ಕೇಳಲು ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ)ರೊಡನೆ ಹೇಳಿದರು. ಸುರಾಕಾ ತಾನು ಹಿಂಬಾಲಿಸಿ ಬಂದ ಉದ್ದೇಶವನ್ನು ವಿವರಿಸಿದನು. ನಿಮ್ಮಿಬ್ಬರನ್ನು ಹಿಡಿದು ತರುವವರಿಗೆ ಮಕ್ಕಾದವರು ಬಹುಮಾನವನ್ನು ಘೋಷಿಸಿದ್ದಾರೆ ಹಾಗೂ ಅದೇ ಆಮಿಷದಿಂದ ತಾನು ಬಂದಿರುವುದಾಗಿಯೂ ಆದರೆ ತನಗೆ ಆದ ಅನುಭವದಿಂದಾಗಿ ತಾನು ಹಿಂಬಾಲಿಸುತ್ತಿರುವುದು ಸರಿಯಲ್ಲ ಎಂದು ಅರಿತುಕೊಂಡಿರುವುದಾಗಿಯೂ ಹೇಳಿದನು. ಅವನು ದಾರಿಗೆ ಬೇಕಾದ ಆಹಾರ ಮತ್ತು ಪ್ರಯಾಣದ ವಸ್ತುಗಳನ್ನು ನೀಡಲು ಮುಂದಾದನು, ಆದರೆ ಹಝ್ರತ್ ಪೈಗಂಬರ್(ಸ) ಅವುಗಳನ್ನು ಸ್ವೀಕರಿಸಲಿಲ್ಲ ಮತ್ತು ಕೇವಲ ನಮ್ಮ ಬಗ್ಗೆ ಯಾರಿಗೂ ಹೇಳಬೇಡ ಎಂದಷ್ಟೇ ಹೇಳಿದರು. ಯಾರೊಡನೆಯೂ ಹೇಳುವುದಿಲ್ಲವೆಂದು ಸುರಾಕಾ ವಾಗ್ದಾನ ಮಾಡಿದನು ಮತ್ತು ತನಗಾಗಿ ಅಭಯದ ಪತ್ರವನ್ನು ಬೇಡಿದನು. ಹಝ್ರತ್ ಪೈಗಂಬರ್(ಸ)ರ ಸೂಚನೆಯ ಮೇರೆಗೆ ಅವನಿಗೆ ಅಭಯ ಪತ್ರವನ್ನು ನೀಡಲಾಯಿತು. ಒಂದು ವರದಿಯ ಪ್ರಕಾರ, ಮರಳಿ ಹೋಗುವಾಗ ಹಝ್ರತ್ ಪೈಗಂಬರ್(ಸ) ಸುರಾಕಾನೊಡನೆ ಹೀಗೆ ಹೇಳಿದರು: "ಎಲೈ ಸುರಾಕಾ, ಕಿಸ್ರಾ ರಾಜನ ಬಳೆಗಳು ನಿನ್ನ ಕೈಯಲ್ಲಿ ಇರುವಾಗ ನಿನ್ನ ಸ್ಥಿತಿ ಹೇಗಿರಬಹುದು?" ಸುರಾಕಾ ಆಶ್ಚರ್ಯದಿಂದ ಕೇಳಿದನು: "ಕಿಸ್ರಾ ಬಿನ್ ಹುರ್ಮುಝ್?" ನಬಿ(ಸ) ಹೇಳಿದರು: "ಹೌದು, ಅದೇ ಕಿಸ್ರಾ ಬಿನ್ ಹುರ್ಮುಝ್." ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ಕಿಸ್ರಾನ ಬಳೆಗಳು, ಕಿರೀಟ ಮತ್ತು ಸೊಂಟದ ಪಟ್ಟಿಯನ್ನು ತರಲಾದಾಗ, ಹಝ್ರತ್ ಉಮರ್(ರ) ಸುರಾಕಾನನ್ನು ಕರೆಸಿದರು, ಅವನಿಗೆ ಆ ಬಳೆಗಳನ್ನು ತೊಡಿಸಿದರು

ಮತ್ತು ಹೀಗೆ ಹೇಳಲು ಆದೇಶಿಸಿದರು: “ಕಿಸ್ರಾ ಬಿನ್ ಹುರ್ಮುಝ್‌ನಿಂದ ಇವೆರಡನ್ನೂ ಕಸಿದುಕೊಂಡು ದಯಪಾಲಿಸಿದ ಆ ಅಲ್ಲಾಹನಿಗೆ ಎಲ್ಲ ಪ್ರಶಂಸೆಗಳು.”

ಸಾಧನಸಾಮಾಗ್ರಿಗಳ ಏರ್ಪಾಡು ಮಾಡುವುದು, ಬಳಸುವುದು ಮತ್ತು ನಂತರ ಅಲ್ಲಾಹನ ಮೇಲೆ ಭರವಸೆ ಇಡುವುದು ಅವಶ್ಯಕವಾಗಿದೆ. ಹಝ್ರತ್ ಪೈಗಂಬರ್(ಸ)ರ ತವಕ್ಕುಲನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಅಂಶವನ್ನು ಈ ರೀತಿ ವಿವರಿಸಿದ್ದಾರೆ: “ಯಾವ ವ್ಯಕ್ತಿಗೆ ದೇವನ ಅಸ್ತಿತ್ವದ ಮೇಲೆ ನಂಬಿಕೆಯಿರುತ್ತದೆಯೋ ಮತ್ತು ಅವನು ತನ್ನನ್ನು ಒಂದು ವಿಶೇಷ ಉದ್ದೇಶಕ್ಕಾಗಿ ಸೃಷ್ಟಿಸಿದ್ದಾನೆ ಎಂಬ ದೃಢವಿಶ್ವಾಸವೂ ಇರುತ್ತದೆಯೋ, ಅಂಥವನು ಕರ್ಮವನ್ನು ತ್ಯಜಿಸಲು ಹೇಗೆ ಸಾಧ್ಯ? ಅಂಥವನು ಅತಿ ಹೆಚ್ಚು ಕರ್ಮಶೀಲನಾಗಿರುತ್ತಾನೆ. ಮುಹಮ್ಮದ್ ರಸೂಲುಲ್ಲಾಹ್(ಸ)ರ ಕರ್ಮಗಳು ಅವರ ಈಮಾನಿನ ಕಾರಣದಿಂದಾಗಿದ್ದವು, ಏಕೆಂದರೆ ದೇವನೊಬ್ಬನಿದ್ದಾನೆ ಮತ್ತು ಅವನು ನನ್ನನ್ನು ವಿಶೇಷ ಉದ್ದೇಶಕ್ಕಾಗಿ ಸೃಷ್ಟಿಸಿದ್ದಾನೆ ಎಂದು ಯಾರು ತಿಳಿದಿರುತ್ತಾನೋ, ಅವನು ಆ ಉದ್ದೇಶವನ್ನು ಸಾಧಿಸಲು ಪ್ರಯತ್ನವನ್ನು ಸಹ ಮಾಡುತ್ತಾನೆ. ಆದ್ದರಿಂದ ಮುಹಮ್ಮದ್ ರಸೂಲುಲ್ಲಾಹ್(ಸ) ಒಂದು ಕಡೆ ಈಮಾನನ್ನು ಪ್ರಕಟಿಸುತ್ತಾರೆ ಮತ್ತು ಸೌರ್ ಗುಹೆಯಲ್ಲಿ ಕುಳಿತುಕೊಂಡು ಹಝ್ರತ್ ಅಬೂಬಕರ್(ರ)ರೊಡನೆ, ‘ಅಬೂಬಕರ್, ಗಾಬರಿಯಾಗಬೇಡ ದೇವನು ನಮ್ಮೊಂದಿಗಿದ್ದಾನೆ ಮತ್ತು ಅವನೇ ನಮ್ಮ ರಕ್ಷಕನಾಗಿದ್ದಾನೆ’ ಎಂದು ಹೇಳುತ್ತಾರೆ. ಮತ್ತೊಂದೆಡೆ ಅವರು ಧರ್ಮದ ಇತರ ಕಾರ್ಯಗಳಲ್ಲಿ ಹಗಲು ರಾತ್ರಿ ಎಷ್ಟೊಂದು ಮಗ್ನರಾಗಿರುತ್ತಾರೆಂದರೆ, ಇಡೀ ಲೋಕದ ಜವಾಬ್ದಾರಿಯನ್ನು ಅವರಿಗೆ ಮಾತ್ರ ಒಪ್ಪಿಸಲಾಗಿದೆ ಎಂಬಂತೆ ಭಾಸವಾಗುತ್ತದೆ.”

ಹಾಗಾಗಿ ಎಷ್ಟರ ಮಟ್ಟಿಗೆ ಮಾನವ ಪ್ರಯತ್ನಗಳನ್ನು ಮಾಡಬಹುದಾಗಿತ್ತೋ, ಅಷ್ಟರ ಮಟ್ಟಿಗೆ ಎಲ್ಲ ಪ್ರಯತ್ನಗಳನ್ನು ಕೂಡ ನಬಿ(ಸ) ಮಾಡುತ್ತಿದ್ದರು. ಅನಂತರ ಅಲ್ಲಾಹನ ಮೇಲೆ ಭರವಸೆ ಇಡುತ್ತಿದ್ದರು. ಆದ್ದರಿಂದ ನಬಿ(ಸ)ರ ಈಮಾನ್ ಅಜ್ಞಾನ ಮತ್ತು ಸೋಮಾರಿತನದ ಈಮಾನ್ ಆಗಿರಲಿಲ್ಲ, ಬದಲಾಗಿ ನಬಿ(ಸ)ರ ಈಮಾನ್ ನೇರ ಅನುಭವದ ಈಮಾನ್ ಆಗಿತ್ತು; ಯಾರು ಒಂದೇ ಸಮಯದಲ್ಲಿ ತವಕ್ಕುಲ್ ಮತ್ತು ಕೆಲಸ ಎರಡನ್ನೂ ಮಾಡುತ್ತಾನೋ, ಅಂದರೆ ಕೆಲಸ ಹಾಗೂ ತವಕ್ಕುಲ್ ಎರಡನ್ನೂ ಒಟ್ಟಿಗೆ ಇರಿಸುತ್ತಾನೋ ಅವನಿಗೆ ಮಾತ್ರ ನೇರ ಅನುಭವದ ಈಮಾನ್ ಇರುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: “ನಮ್ಮ ನಬಿ(ಸ)ರಿಗೆ ಮಕ್ಕಾದಲ್ಲಿ ಹದಿಮೂರು ವರ್ಷಗಳ ಕಾಲ ಎದುರಾದ ಸಂಕಷ್ಟಗಳ ಕಾಲಘಟ್ಟದ ಚರಿತ್ರೆಯನ್ನು ಓದಿದರೆ ಅತ್ಯಂತ ಸ್ಪಷ್ಟವಾಗಿ ತಿಳಿದು ಬರುವುದೇನೆಂದರೆ; ಸಂಕಷ್ಟಗಳ ಸಮಯದಲ್ಲಿ ಒಬ್ಬ ಪರಿಪೂರ್ಣ ಸತ್ಯವಂತ ಯಾವ ನೈತಿಕತೆಯನ್ನು ಪ್ರದರ್ಶಿಸಬೇಕೋ, ಅಂದರೆ ದೇವನ ಮೇಲೆ ಭರವಸೆ ಇಡುವುದು, ಗೋಳಾಡದೇ ಇರುವುದು, ತನ್ನ ಕಾರ್ಯದಲ್ಲಿ ಸುಸ್ತಾಗದಿರುವುದು ಮತ್ತು ಯಾರ ಬೆದರಿಕೆಗೂ ಅಂಜದಿರುವುದು, ಇಂತಹ ಗುಣಗಳನ್ನು ಹಝ್ರತ್ ಪೈಗಂಬರ್(ಸ) ಎಷ್ಟರಮಟ್ಟಿಗೆ ಪ್ರದರ್ಶಿಸಿದರೆಂದರೆ ಸತ್ಯನಿಷೇಧಿಗಳು ಆ ಸ್ಥಿರತೆಯನ್ನು ಕಂಡು ಸತ್ಯವಿಶ್ವಾಸ ಕೈಗೊಂಡರು ಮತ್ತು ‘ಯಾರಿಗೆ ದೇವನ ಮೇಲೆ ಸಂಪೂರ್ಣ ಭರವಸೆಯಿರುವುದಿಲ್ಲವೋ ಅವರಿಗೆ ಇಂತಹ ಸ್ಥಿರತೆಯನ್ನು ತೋರಲು ಮತ್ತು ಈ ರೀತಿಯಲ್ಲಿ ಕಷ್ಟಗಳನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ’ ಎಂಬುದಕ್ಕೂ ಅವರು ಸಾಕ್ಷಿಗಳಾದರು.

ಮದೀನಾಕ್ಕೆ ಆಗಮಿಸಿದ ನಂತರ ಸಹ ಹಝ್ರತ್ ಪೈಗಂಬರ್(ಸ) ತವಕ್ಕುಲ್‌ನೊಂದಿಗೆ ಭೌತಿಕ ಸಾಧನಗಳ ನೆರವನ್ನು ಪಡೆದರು.

ಹಝ್ರತ್ ಉಬಯ್ ಬಿನ್ ಕಅಬ್‌ರಿಂದ ವರದಿಯಾಗಿದೆ: ರಸೂಲುಲ್ಲಾಹ್(ಸ) ಮತ್ತು ಸಹಾಬಿಯರು ಮದೀನಾಕ್ಕೆ ಬಂದಾಗ ಮತ್ತು ಅನ್ಸಾರಿಗಳು ಅವರಿಗೆ ಆಶ್ರಯ ನೀಡಿದಾಗ, ಇಡೀ ಅರೇಬಿಯರು ಅವರನ್ನು ಎದುರಿಸಲು ಒಟ್ಟುಗೂಡಿದರು. ಮುಸಲ್ಮಾನರ ಸ್ಥಿತಿ ಹೇಗಿತ್ತೆಂದರೆ, ಅವರು ಆಯುಧಗಳಿಲ್ಲದೆ ಹಗಲು ರಾತ್ರಿ ಕಳೆಯುತ್ತಿರಲಿಲ್ಲ. ತವಕ್ಕುಲ್‌ನೊಂದಿಗೆ ಸದಾ ತಮ್ಮ ರಕ್ಷಣೆಯ ವ್ಯವಸ್ಥೆಯನ್ನೂ ಇಟ್ಟುಕೊಂಡಿರುತ್ತಿದ್ದರು. ಹಝ್ರತ್ ಆಯಿಷಾ(ರ) ವರದಿ ಮಾಡುತ್ತಾರೆ: ಒಂದು ರಾತ್ರಿ ರಸೂಲುಲ್ಲಾಹ್(ಸ) ಎಚ್ಚರವಾಗಿಯೇ ಇದ್ದರು ಮತ್ತು ಹೀಗೆ ಹೇಳಿದರು: ‘ನನ್ನ ಸಹಾಬಿಯರಲ್ಲಿ ಯಾರಾದರೂ ಒಳ್ಳೆಯ ವ್ಯಕ್ತಿ ಇಂದು ರಾತ್ರಿ ನನ್ನ ಕಾವಲು ಕಾಯುತ್ತಿದ್ದರೆ ಎಷ್ಟು ಚೆನ್ನಾಗಿತ್ತು.’ ಆ ಸ್ಥಿತಿಯಲ್ಲೇ ಆಯುಧಗಳ ಶಬ್ದ ಕೇಳಿಸಿತು. ವಿಚಾರಿಸಿದಾಗ ಸಅದ್ ಬಿನ್ ಅಬೀ ವಕ್ಕಾಸ್(ರ) ನಬಿ(ಸ)ರ ರಕ್ಷಣೆಗಾಗಿ ಬಂದಿರುವುದಾಗಿ’ ತಿಳಿಸಲಾಯಿತು. ಮತ್ತೊಂದು ವರದಿಯಲ್ಲಿ ಸಅದ್ ಮತ್ತು ಹುದೈಫಾ ಬಂದಿರುವ ಬಗ್ಗೆ ಉಲ್ಲೇಖವಿದೆ. ರಸೂಲುಲ್ಲಾಹ್(ಸ) ದುಆ ಮಾಡಿ ಮಲಗಿದರು. ಆ ಸಮಯದಲ್ಲಿ ಈ ಆಯತ್ ಅವತೀರ್ಣವಾಯಿತು: **“ವಲ್ಲಾಹು ಯಅ್‌ಸಿಮುಕ ಮಿನನ್ನಾಸ್”** (ಅಲ್ಲಾಹನು ನಿನ್ನನ್ನು ಜನರಿಂದ ರಕ್ಷಿಸುವನು). ಇದರ ನಂತರ ನಬಿ(ಸ) ಹೀಗೆ ಹೇಳಿದರು: “ಈಗ ಜನರು ಮರಳಿ ಹೋಗಬಹುದು, ಅಲ್ಲಾಹನು ನನ್ನ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾನೆ.” ಇದರಿಂದ ತಿಳಿದು ಬರುವುದೇನೆಂದರೆ, ಅಲ್ಲಾಹನ ಕಡೆಯಿಂದ ಭರವಸೆ ಸಿಗುವ ವರೆಗೆ ನಬಿ(ಸ) ಬಾಹ್ಯ ರಕ್ಷಣೆಯ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದರು ಮತ್ತು ಅಲ್ಲಾಹನ ಕಡೆಯಿಂದ ರಕ್ಷಣೆಯ ಭರವಸೆ ಸಿಕ್ಕಾಗ ಕಾವಲನ್ನು ಹಿಂತೆಗೆದುಕೊಂಡರು.

ಹಝ್ರತ್ ಪೈಗಂಬರ್(ಸ) ವಿವಿಧ ಅರಸರಿಗೆ ತಬ್ಲೀಗ್ ಪತ್ರಗಳನ್ನು ಕಳುಹಿಸಿದಾಗ, ಅವರ ಪತ್ರವನ್ನು ಕಿಸ್ರಾ ರಾಜನು ಅಹಂಕಾರದಿಂದ ಹರಿದು ಚೂರುಚೂರು ಮಾಡಿದನು. ನಬಿ(ಸ)ರಿಗೆ ಇದರ ಬಗ್ಗೆ ತಿಳಿದಾಗ, ಸಂಪೂರ್ಣ

ತವಕ್ಕುಲ್‌ನೊಂದಿಗೆ ನಬಿ(ಸ) ಹೀಗೆ ಹೇಳಿದರು: "ದೇವನೇ ಸ್ವತಃ ಈ ಜನರನ್ನು ಛಿದ್ರಗೊಳಿಸಲಿ." ಕಿಸ್ರಾ ರಾಜನು ಯೆಮನ್‌ನ ಗವರ್ನರ್ ಮೂಲಕ ನಬಿ(ಸ)ರನ್ನು ಬಂಧಿಸಲು ಇಬ್ಬರು ಸೈನಿಕರನ್ನು ಕಳುಹಿಸಿದನು. ಅವರು ತಮ್ಮ ಯಜಮಾನನ ಆದೇಶದ ಬಗ್ಗೆ ನಬಿ(ಸ)ರಿಗೆ ತಿಳಿಸಿದಾಗ, ನಬಿ(ಸ) ಯಾವುದೇ ಗಾಬರಿಯನ್ನು ವ್ಯಕ್ತಪಡಿಸದೆ ಹೀಗೆ ಹೇಳಿದರು: "ಇಂದು ರಾತ್ರಿ ಇಲ್ಲಿಯೇ ತಂಗಿರಿ, ನಾಳೆ ಉತ್ತರಿಸುವೆನು." ಮರುದಿನ ಬೆಳಿಗ್ಗೆ ಅವರೊಡನೆ ನಬಿ(ಸ) ಮರಳಿ ಹೋಗುವಂತೆ ಹೇಳುತ್ತಾ ಹೀಗೆ ಹೇಳಿದರು: "ನನ್ನ ಪ್ರಭು ಇಂದು ರಾತ್ರಿ ನಿನ್ನ ಪ್ರಭುವನ್ನು, ಅಂದರೆ ರಾಜನನ್ನು ಕೊಂದಿದ್ದಾನೆ." ಅದೇ ರಾತ್ರಿ ಖುಸ್ರು ಪರ್ವೇಝ್‌ನನ್ನು ಅವನ ಮಗ ಶೀರಾವಿಯಾ ಸೈರಸ್ ಕೊಂದಿದ್ದನೆಂದು ನಂತರ ತಿಳಿದುಬಂತು. ಹಝ್ರತ್ ಪೈಗಂಬರ್(ಸ) ಯುದ್ಧಗಳಿಗೂ ಸಂಪೂರ್ಣ ತವಕ್ಕುಲ್‌ನೊಂದಿಗೆ ಅಲ್ಲಾಹನ ಅನುಮತಿಯಿಂದ ಹೋಗುತ್ತಿದ್ದರು ಮತ್ತು ಹೊರಡುವಾಗ ಈ ರೀತಿ ದುಆ ಮಾಡುತ್ತಿದ್ದರು: **"ಅಲ್ಲಾಹುಮ್ಮಾ ಅನ್ತ ಅಝುದೀ ವಅನ್ತ ನಸೀರೀ ವಬಿಕಾ ಉಕಾತಿಲು"**, ಅಂದರೆ "ಹೇ ಅಲ್ಲಾಹ್, ನೀನೇ ನನ್ನ ತೋಳು ಆಗಿದ್ದೀಯಾ, ನೀನೇ ನನ್ನ ಸಹಾಯಕ ಆಗಿದ್ದೀಯಾ ಮತ್ತು ನಿನ್ನ ಮೂಲಕವೇ ನಾನು ಯುದ್ಧ ಮಾಡುತ್ತೇನೆ."

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಮನುಷ್ಯನಿಗೆ ಕಷ್ಟದ ಸಮಯದಲ್ಲಿ ಆತಂಕ ಉಂಟಾಗುವುದಾದರೂ, ಆತ ಎಂದಿಗೂ ತವಕ್ಕುಲನ್ನು ಕೈಬಿಡಬಾರದು. ಹಝ್ರತ್ ಪೈಗಂಬರ್(ಸ)ರಿಗೂ ಬದ್ರ್ ಯುದ್ಧದ ಸಂದರ್ಭದಲ್ಲಿ ತೀವ್ರ ಆತಂಕ ಉಂಟಾಗಿತ್ತು, ಹಾಗಾಗಿ ಅವರು ಹೀಗೆ ಪ್ರಾರ್ಥಿಸುತ್ತಿದ್ದರು: "ಹೇ ನನ್ನ ಪ್ರಭು, ನೀನು ಈ ಗುಂಪನ್ನು ನಾಶಮಾಡಿದರೆ, ನಂತರ ಭೂಮಿಯಲ್ಲಿ ನಿನ್ನ ಆರಾಧನೆಯು ಎಂದಿಗೂ ಮಾಡಲ್ಪಡುವುದಿಲ್ಲ." ಆದರೆ ನಬಿ(ಸ)ರ ಆತಂಕ ಕೇವಲ ಮಾನವ ಸಹಜ ಗುಣದಿಂದಾಗಿತ್ತು, ಏಕೆಂದರೆ ಇನ್ನೊಂದೆಡೆ ನಬಿ(ಸ) ತವಕ್ಕುಲನ್ನು ಎಂದಿಗೂ ಕೈಬಿಡಲಿಲ್ಲ. ದೃಷ್ಟಿ ಆಕಾಶದ ಕಡೆಗಿತ್ತು ಮತ್ತು ದೇವನು ನನ್ನನ್ನು ಖಂಡಿತವಾಗಿಯೂ ವ್ಯರ್ಥ ಮಾಡುವುದಿಲ್ಲ ಎಂಬ ದೃಢವಿಶ್ವಾಸವಿತ್ತು. ನಿರಾಶೆ ಅಥವಾ ಹತಾಶೆಯನ್ನು ಹತ್ತಿರ ಸುಳಿಯಲು ಬಿಡಲಿಲ್ಲ. ಇಂತಹ ಆತಂಕಗಳು ಬರುವುದು ಮಾನವ ನೈತಿಕತೆ ಮತ್ತು ಪದವಿಗಳ ಪೂರ್ಣಗೊಳಿಸುವಿಕೆಗೆ ಅವಶ್ಯಕವಾಗಿದೆ; ಆದರೆ ಮನುಷ್ಯನು ಹತಾಶೆಯನ್ನು ಹತ್ತಿರ ಸುಳಿಯಲು ಬಿಡಬಾರದು, ಏಕೆಂದರೆ ಹತಾಶೆ ಮತ್ತು ನಿರಾಶೆಯು ಸತ್ಯನಿಷೇಧಿಗಳ ಗುಣವಾಗಿದೆ. ಮನುಷ್ಯನಿಗೆ ವಿವಿಧ ರೀತಿಯ ಆಲೋಚನೆಗಳು ಆತಂಕದ ಅನುಮಾನಗಳನ್ನು ಹುಟ್ಟುಹಾಕುತ್ತವೆ, ಆದರೆ ಈಮಾನ್ ಆ ಅನುಮಾನಗಳನ್ನು ದೂರ ಮಾಡುತ್ತದೆ. ಮಾನವನ ಸಹಜಗುಣ ಆತಂಕವನ್ನು ಉಂಟುಮಾಡಿದರೆ, ಈಮಾನ್ ಅದನ್ನು ದೂರಮಾಡುತ್ತದೆ.

ಅಹ್‌ಝಾಬ್ ಯುದ್ಧದಲ್ಲಿ ಮುಸ್ಲಿಮರು ಮದೀನಾದಲ್ಲಿಯೇ ಉಳಿದುಕೊಂಡು ಶತ್ರುಗಳನ್ನು ಎದುರಿಸಲು ನಿರ್ಧರಿಸಿದರು. ಇದು ತವಕ್ಕುಲ್‌ನ ಕೊರತೆಯಿಂದಾಗಿರಲಿಲ್ಲ, ಬದಲಾಗಿ ಯುದ್ಧ ತಂತ್ರದ ಭಾಗವಾಗಿತ್ತು. ಶತ್ರುಗಳ ಹಠಾತ್ ದಾಳಿಯಿಂದ ರಕ್ಷಣೆ ಪಡೆಯಲು ಮದೀನಾದ ಸುತ್ತಲೂ ಕಂದಕವನ್ನು ಅಗೆಯಲಾಯಿತು. ಮುಸ್ಲಿಮರು ತೀವ್ರ ಬಡತನ ಮತ್ತು ಸಂಕಷ್ಟದ ನಡುವೆಯೂ ಕಂದಕ ತೋಡುವ ಕಾರ್ಯದಲ್ಲಿ ಪಾಲ್ಗೊಂಡರು. ಅಹ್‌ಝಾಬ್ ಯುದ್ಧದ ಸಂದರ್ಭದ ಕುರಿತು ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ ಅನ್ಸಾರಿ(ರ) ವರದಿ ಮಾಡುತ್ತಾರೆ: ಕಂದಕ ತೋಡುತ್ತಿರುವಾಗ ಒಂದು ಗಟ್ಟಿಯಾದ ಕಲ್ಲು ಎದುರಾಯಿತು. ಹಝ್ರತ್ ಪೈಗಂಬರ್(ಸ) ಸ್ವತಃ ಅದನ್ನು ಒಡೆಯಲು ಗುದ್ದಲಿಯನ್ನು ತೆಗೆದುಕೊಂಡರು; ವಾಸ್ತವದಲ್ಲಿ ನಬಿ(ಸ) ಹೊಟ್ಟೆಯ ಮೇಲೆ ಹಸಿವಿನ ತೀವ್ರತೆಯಿಂದಾಗಿ ಕಲ್ಲನ್ನು ಕಟ್ಟಿದ್ದರು ಮತ್ತು ಮೂರು ದಿನಗಳಿಂದ ಏನನ್ನೂ ತಿಂದಿರಲಿಲ್ಲ. ಹಝ್ರತ್ ಜಾಬಿರ್(ರ) ಮನೆಗೆ ಹೋಗಿ ಸ್ವಲ್ಪ ಬಾರ್ಲಿ ಮತ್ತು ಒಂದು ಆಡುಮರಿಯ ವ್ಯವಸ್ಥೆ ಮಾಡಿದರು. ಊಟ ತಯಾರಿಸಿ ರಸೂಲುಲ್ಲಾಹ್(ಸ)ರಿಗೆ ಆಮಂತ್ರಣ ನೀಡಿದರು, ಆದರೆ ನಬಿ(ಸ) ಎಲ್ಲ ಮುಹಾಜಿರ್ ಮತ್ತು ಅನ್ಸಾರಿಗಳನ್ನು ತಮ್ಮೊಂದಿಗೆ ಕರೆದೊಯ್ದರು. ಅಲ್ಪ ಪ್ರಮಾಣದ ಊಟದಲ್ಲಿ ಅಲ್ಲಾಹನು ಸಮೃದ್ಧಿಯನ್ನು ನೀಡಿದನು ಮತ್ತು ಎಲ್ಲ ಸಹಾಬಿಯರ ಹೊಟ್ಟೆ ತುಂಬಿತು, ಮಾತ್ರವಲ್ಲ ಊಟ ಉಳಿಯಿತು. ನಬಿ(ಸ) ಹಝ್ರತ್ ಜಾಬಿರ್(ರ)ರ ಪತ್ನಿಯೊಡನೆ ಹೀಗೆ ಹೇಳಿದರು: "ಈಗ ಇದನ್ನು ತಿನ್ನಿರಿ ಮತ್ತು ಕೊಡುಗೆಯಾಗಿಯೂ ಕಳುಹಿಸಿರಿ, ಏಕೆಂದರೆ ಜನರು ಬಹಳ ಹಸಿವಿನಲ್ಲಿ ಇದ್ದಾರೆ." ಹುನೈನ್ ಯುದ್ಧದ ಬಗ್ಗೆ ಹಝ್ರತ್ ಬರಾಅ್ ಬಿನ್ ಆಝಿಬ್(ರ) ವರದಿ ಮಾಡುತ್ತಾರೆ: ಒಂದು ಹಂತದಲ್ಲಿ ಮುಸಲ್ಮಾನರು ಹಿಂದೆ ಸರಿದರು, ಆದರೆ ರಸೂಲುಲ್ಲಾಹ್(ಸ) ಯುದ್ಧಭೂಮಿಯಿಂದ ಹಿಂದೆ ಸರಿಯಲಿಲ್ಲ. ನಬಿ(ಸ) ತಮ್ಮ ಬಿಳಿ ಹೇಸರಗತ್ತೆಯ ಮೇಲೆ ಕುಳಿತಿದ್ದರು ಮತ್ತು ಅಬೂಸುಫಿಯಾನ್ ಬಿನ್ ಹಾರಿಸ್ ಬಿನ್ ಅಬ್ದುಲ್ ಮುತ್ತಲಿಬ್ ಅದರ ಲಗಾಮನ್ನು ಹಿಡಿದಿದ್ದರು. ನಬಿ(ಸ) ಈ ಪದ್ಯ ಪಠಿಸುತ್ತಿದ್ದರು: **"ಅನನ್ನಬಿಯ್ಯು ಲಾ ಕಝಿಬ್, ಅನಬ್ನು ಅಬ್ದಿಲ್ ಮುತ್ತಲಿಬ್"**, ಅಂದರೆ "ನಾನು ಪ್ರವಾದಿಯಾಗಿದ್ದೇನೆ, ಇದರಲ್ಲಿ ಯಾವುದೇ ಸುಳ್ಳಿಲ್ಲ; ನಾನು ಅಬ್ದುಲ್ ಮುತ್ತಲಿಬ್‌ನ ಪುತ್ರನಾಗಿದ್ದೇನೆ."

ಬದ್ರ್ ಯುದ್ಧದ ಸಂದರ್ಭದಲ್ಲಿ ಹಬೀಬ್ ಬಿನ್ ಯಸಾಫ್ ಎಂಬ ಶಕ್ತಿಶಾಲಿ ಮತ್ತು ಧೈರ್ಯಶಾಲಿ ವ್ಯಕ್ತಿಯು ಮುಸ್ಲಿಮರೊಂದಿಗೆ ಯುದ್ಧದಲ್ಲಿ ಪಾಲ್ಗೊಳ್ಳಲು ಬಯಸಿದ್ದನು, ಆದರೆ ಅವನು ಆ ವೇಳೆ ಮುಸಲ್ಮಾನನಾಗಿರಲಿಲ್ಲ. ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: "ನಮ್ಮ ಧರ್ಮದಲ್ಲಿರುವವರು ಮಾತ್ರ ನಮ್ಮೊಂದಿಗೆ ಯುದ್ಧಕ್ಕೆ ಹೋಗಬಹುದು." ಹಬೀಬ್ ಬಿನ್ ಯಸಾಫ್ ಎರಡನೇ ಬಾರಿ ಮತ್ತು ಮತ್ತೆ ಮೂರನೇ ಬಾರಿ ಬಂದನು. ಕೊನೆಗೆ ಹಝ್ರತ್ ಪೈಗಂಬರ್(ಸ) ಅವನೊಡನೆ "ನೀನು ಅಲ್ಲಾಹನು ಮತ್ತು ಅವನ ಪ್ರವಾದಿಯನ್ನು ನಂಬುತ್ತೀಯಾ?" ಎಂದು ಕೇಳಿದಾಗ, ಅವನು ಹೌದು ಎಂದು ಉತ್ತರಿಸಿ ಮುಸಲ್ಮಾನನಾದನು ಮತ್ತು ಅತ್ಯಂತ ಧೈರ್ಯದಿಂದ ಯುದ್ಧದಲ್ಲಿ

ಪಾಲ್ಗೊಂಡನು. ಇದರಿಂದ ತಿಳಿದು ಬರುವುದೇನೆಂದರೆ, ತೀವ್ರ ಅಗತ್ಯವಿದ್ದರೂ ರಸೂಲ್(ಸ) ಅಲ್ಲಾಹನ ವಾಗ್ದಾನಗಳ ಮೇಲೆ ದೃಢನಂಬಿಕೆಯಿಡುತ್ತಾ ಮುಸ್ಲಿಮೇತರರ ಸಹಾಯವನ್ನು ಸ್ವೀಕರಿಸುತ್ತಿರಲಿಲ್ಲ.

ಹಝ್ರ‍ತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಇಂದಿನ ಬುದ್ಧಿವಂತರ ದೃಷ್ಟಿಯಲ್ಲಿ ಯಾರನ್ನಾದರೂ ಶತ್ರುವನ್ನಾಗಿಸಿಕೊಳ್ಳುವುದು ತಪ್ಪಾಗಿದೆ, ಆದರೆ ಸತ್ಯವೇನೆಂದರೆ, ಇದು ಕೂಡ ಸತ್ಯತೆಯ ಒಂದು ಪುರಾವೆಯಾಗಿದೆ. ಹಝ್ರ‍ತ್ ಪೈಗಂಬರ್(ಸ) ಯಾರೊಂದಿಗೂ ರಾಜಿ ಮಾಡಿಕೊಳ್ಳಲಿಲ್ಲ, ಎಲ್ಲರೂ ಅವರ ವೈರಿಗಳಾದರು. ಆ ಜನರ ದೃಷ್ಟಿಯಲ್ಲಿ, ನಬಿ(ಸ) ತಪ್ಪು ಮಾಡಿದ್ದಂತೆ ಆಗಿದೆ. (ನಊಧುಬಿಲ್ಲಾಹ್). ವಾಸ್ತವದಲ್ಲಿ, ಕೇವಲ ದೇವನಿಗಾಗಿ ಎಲ್ಲರೊಂದಿಗೆ ಶತ್ರುತ್ವ ಉಂಟುಮಾಡುವುದು ನಬಿ(ಸ) ಸತ್ಯತೆಯ ಸ್ಪಷ್ಟ ಪುರಾವೆಯಾಗಿದೆ, ಇದರಿಂದ ನಬಿ(ಸ)ರ ಈಮಾನಿನ ಶಕ್ತಿಯ ಸ್ಥಿತಿ ತಿಳಿದುಬರುತ್ತದೆ. **ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ವ ಬಾರಿಕ್ ವ ಸಲ್ಲಿಮ್ ಇನ್ನಕ ಹಮೀದುಮ್ಮಜೀದ್.**

——————————*****——————————

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّئَاتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ۔ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُاَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَأْمُرُبِالْعَدْلِ وَالْاِحْسَانِ وَاِیْتَاءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ۝ اُذْکُرُوااللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ.


***Friday Sermon delivered by Hadrath Khaleefatul Masih Al Khamis(atba)***

At, ***'Masjid Mubarak'***, *Islamabad, Tilford*, U.K. On 18-09-2026

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon